ಆ) ನಂದಿನಿ ಬಡಾವಣೆಯ ಪ್ರತಿಯೊಂದು ಬ್ಲಾಕ್ ಮನೆಗಳಿಗೆ ಜಲ ಮಂಡಳಿ ಮೀಟರ್ ಅಳವಡಿಸಿರುವುದರಿಂದ ಆ ಬ್ಲಾಕ್ನಲ್ಲಿರುವ ವಸತಿ ಗೃಹದವರೇ ನೇರವಾಗಿ ಬಿಲ್ಲನ್ನು ಜಲ ಮಂಡಳಿಗೆ ಪಾವತಿ ಮಾಡುತ್ತಾರೆ.

ಇ) ಈ ವಿಷಯವು ಬೆಂಗಳೂರು ಜಲ ಮಂಡಳಿಗೆ ಸಂಬಂಧಪಟ್ಟಿರುತ್ತದೆ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಅಧ್ಯಕ್ಷರು : ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುನದೆ ಮಂಡಿಸಲಾಯಿತು.

## ಕಾರ್ಯದರ್ಶಿಗಳ ವರದಿ

ಕಾರ್ಯದರ್ಶಿ : (ಶ್ರೀ ಎನ್.ಎಚ್. ಮುತ್ತಲಗೇರಿ) : ಕರ್ನಾಟಕ ವಿಧಾನ ಸಭೆ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 125 (1)ರ ಮೇರೆಗೆ ಸಂಸತ್ತಿನಿಂದ ಸ್ವೀಕರಿಸಿರುವ ಸಂದೇಶದೊಡನೆ 1992ನೇ ಇಸವಿಯ ಸಂವಿಧಾನದ 72ನೇ ತಿದ್ದುಪಡಿ ವಿಧೇಯಕದ ಪ್ರತಿಯನ್ನು ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು : ಸಭೆಯ ಮುಂದೆ ಮಂಡಿಸಲಾಯಿತು.

## ಪ್ರಸ್ತಾವ

**ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಮತ್ತು ಕರ್ನಾಟಕ ವಿದ್ಯುತ್ ನಿಗಮಗಳ ಕಾರ್ಯನಿರ್ವಹಣೆ ಮತ್ತು ಆಡಳಿತ ದಕ್ಷತೆಯನ್ನು ಉತ್ತಮ ಪಡಿಸಲು ವಿಧಾನ ಮಂಡಲ ಜಂಟೀ ಸದನದ ಸಮಿತಿ ವರದಿಯನ್ನು ನೀಡಲು ಕಾಲಾವಧಿ ವಿಸ್ತರಣೆ.**

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೇ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಮತ್ತು ಕರ್ನಾಟಕ ವಿದ್ಯುತ್ ನಿಗಮಗಳ ಕಾರ್ಯನಿರ್ವಹಣೆ ಮತ್ತು ಆಡಳಿತ ದಕ್ಷತೆಯನ್ನು ಉತ್ತಮಪಡಿಸಲು ಸಲುವಾಗಿ ಸರ್ಕಾರಕ್ಕೆ ಸೂಕ್ತ ಶಿಫಾರಸ್ಸುಗಳನ್ನು ನೀಡಲು ರಚಿಸಿರುವ ವಿಧಾನ ಮಂಡಲದ ಜಂಟೀ ಸದನದ ಸಮಿತಿಗೆ ತನ್ನ ವರದಿಯನ್ನು ನೀಡಲು ಮಾರ್ಚಿ 10 1994ರ ವರೆವಿಗೂ ಕಾಲಾವಕಾಶವನ್ನು ನೀಡಬೇಕೆಂದು ನಾನು ಈ ಸದನವನ್ನು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಮತ್ತು ಕರ್ನಾಟಕ ವಿದ್ಯುತ್ ನಿಗಮಗಳ ಕಾರ್ಯನಿರ್ವಹಣೆ ಮತ್ತು ಆಡಳಿತದಕ್ಷತೆಯನ್ನು ಉತ್ತಮಪಡಿಸುವ ಸಲುವಾಗಿ ಸರ್ಕಾರಕ್ಕೆ ಸೂಕ್ತ ಶಿಫಾರಸ್ಸುಗಳನ್ನು ನೀಡಲು ರಚಿಸಿರುವ ವಿಧಾನ ಮಂಡಲದ ಜಂಟೀ ಸದನದ ಸಮಿತಿಗೆ ತನ್ನ ವರದಿಯನ್ನು ನೀಡಲು ಮಾರ್ಚಿ 10 1994ರ ವರೆವಿಗೂ ಕಾಲಾವಕಾಶವನ್ನು ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಜಂಟಿ ಸದನದಸಮಿತಿಗೆ ಕಾಲಾವಕಾಶವನ್ನು ನೀಡಲಾಯಿತು.